# ಅಪಹಾಸ್ಯವೂ ಸಂತೋಷವೇ

## ಅಕುಲ್ ಬಾಲಾಜಿ

ಸ್ಟಾರ್ ಸುವರ್ಣದ 'ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು' ನಿರೂಪಕ



★ *ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು ಸೀಸನ್ ನಾಲ್ಕರ ಭಿನ್ನತೆ ಏನು?*

ಶಿವಮೊಗ್ಗ, ಬಾಗಲಕೋಟೆ, ಮಂಡ್ಯದಲ್ಲಿ ಕಳೆದ ಮೂರು ಸೀಸನ್‌ಗಳನ್ನು ಮಾಡಿದ್ದೇವೆ. ಈ ಬಾರಿ ಹಾಸನ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುವುದು ಒಂದು ವಿಶೇಷ. ಹೇಮಾವತಿ ದಂಡೆಯ ಗೊರೂರನ್ನು ಕೇಂದ್ರವಾಗಿ ಇಟ್ಟುಕೊಂಡು ನಮ್ಮ ಕಾರ್ಯಕ್ರಮ ರಚನೆಯಾಗುತ್ತಿದೆ. ಆಮೂಲಕ ನೆಲಮೂಲದ ಸಂಸ್ಕೃತಿಯನ್ನು ಪ್ರತಿಫಲಿಸುವ ಪ್ರಯತ್ನವಿದೆ. ಸ್ಪರ್ಧಾಳುಗಳೆಲ್ಲಾ ಏನೆಲ್ಲಾ ನಿರೀಕ್ಷೆಯನ್ನು ಹೊತ್ತು ಬಂದಿರುತ್ತಾರೆ. ಅವರು ತಮ್ಮ ಸುಖ, ಐಶ್ವರ್ಯ, ವೈಭೋಗದ ಬದುಕನ್ನು ಬಿಟ್ಟು ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕಿ ತೋರಿಸಬೇಕು. ಇಲ್ಲಿ ಯಾವುದೂ ನಾಟಕೀಯವಾಗಿ ಇರುವುದಿಲ್ಲ. ವಾಸ್ತವ ಗ್ರಾಮ ಭಾರತ ಅನಾವರಣ ಮಾಡುತ್ತೇವೆ. ಹಳ್ಳಿ ಜೀವನ ಅನುಭವಿಸಿ ತೋರಿಸುವ ಕೆಲಸ ಇದೆಯಲ್ಲ ಅದು ತುಂಬಾ ದೊಡ್ಡದು. ಏನಾದರೂ ಸಾಧಿಸಬೇಕು ಎಂಬ ಹಂಬಲ ಹೊತ್ತು ಬಂದಿರುವ ಅನೇಕ ಸ್ಪರ್ಧಾಳುಗಳು ಸೆಗಣಿಯನ್ನು ಸರಿಯಾಗಿ ನೋಡಿರುವುದಿಲ್ಲ. ಇಲ್ಲಿ ಅದನ್ನು ಮುಟ್ಟಬೇಕು, ಬಳಿಯಬೇಕು, ಹೊತ್ತು ತಿಪ್ಪೆಗೆ ಸಾಗಿಸಬೇಕು. ಇದೆಲ್ಲ ತಮಾಷೆಯಲ್ಲ.

★ *ಸೊಗಸಾಗಿ ಕನ್ನಡವನ್ನು ಕಲಿಯಲು ಸಾಧ್ಯವಾಗಿದ್ದು ಹೇಗೆ?*

ಇದೆಲ್ಲಾ ನನ್ನ ಗುರುಗಳಿಂದ ಸಾಧ್ಯವಾಗಿದೆ. ಕನ್ನಡಿಗರ ಬೆಂಬಲ, ನನ್ನನ್ನು ಪ್ರೋತ್ಸಾಹಿಸಿದ ಬಗೆಗೆ ನಾನು ಅಜೀವ ಕೃತಜ್ಞ. ನಟನೆ ಬಯಸಿ ಬಂದನು ನಾನು. ಅದರ ಜೊತೆ ನಿರೂಪಣೆಯಲ್ಲಿ ನನ್ನದೇ ಒಂದು ಶೈಲಿಯನ್ನು ರೂಢಿಸಿಕೊಂಡೆ. ನನ್ನ ಹುಚ್ಚಾಟವನ್ನೆಲ್ಲಾ ಜನ ಪ್ರೀತಿಯಿಂದ ಬೆಂಬಲಿಸಿದ್ದಾರೆ. ಅವರ ವಿಶಾಲ ಹೃದಯದಲ್ಲಿ ನನಗೂ ಪುಟ್ಟ ಅವಕಾಶ ನೀಡಿದ್ದರಿಂದ ನಾನೂ ಒಬ್ಬ ನಿರೂಪಕನಾಗಲು ಸಾಧ್ಯವಾಯಿತು. ಕನ್ನಡ ನಾಡಿನಲ್ಲಿ ಹುಟ್ಟಿಲ್ಲ. ಇಲ್ಲಿ ನೆಲೆಗೊಂಡಿದ್ದೇನೆ. ಮುಂದಿನ ಜನ್ಮದಲ್ಲಾದರೂ ಇಲ್ಲೇ ಹುಟ್ಟಬೇಕು.

★ *ಬೆಳ್ಳಿತೆರೆ– ಕಿರುತೆರೆ ಇದರೊಳಗೆ ಏನಾದರೂ ಕೊರಗುಂಟಾ?*

ಇದನ್ನು ಯೋಚನೆ ಮಾಡಲು ಪುರುಸೊತ್ತು ಇಲ್ಲದಷ್ಟು ಬ್ಯೂಸಿಯಾಗಿದ್ದೇನೆ. ಸಿನಿಮಾಗಳನ್ನೂ ಮಾಡಿದ್ದೇನೆ. ನನಗೆ ರಿಯಾಲಿಟಿ ಶೋಗಳು ಹೆಚ್ಚು ಖುಷಿ ಕೊಟ್ಟಿವೆ. ಇಲ್ಲಿಯ ಅನುಭವವೇ ವಿಭಿನ್ನ. ಕೆಲವು ಸಂದರ್ಭದಲ್ಲಿ ಸಿನಿಮಾ ಬಿಡುಗಡೆಯಾಗುವುದೇ ಕಷ್ಟ. ಬಿಡುಗಡೆಯಾದರೂ ಎಷ್ಟು ಜನ ಎಲ್ಲಿ ನೋಡುತ್ತಾರೆ ಎಂದರೆ ಉತ್ತರ ನಿರಾಶೆಯನ್ನೇ ಉಂಟುಮಾಡುತ್ತದೆ. ನಮ್ಮ ನಟನೆ ಜನರನ್ನು ತಲುಪಬೇಕು ಎಂದರೆ ಅದೃಷ್ಟ. ಟಿವಿಯಲ್ಲಿ ತತಕ್ಷಣಕ್ಕೆ ಮುಖಾಮುಖಿ ಆಗುತ್ತೇವೆ. ಡಾನ್ಸ್, ಕಾಮಿಡಿ, ಸಂಗೀತ ಹೀಗೆ ಬೇರೆ ಬೇರೆ ಬಗೆಯ 12 ರಿಯಾಲಿಟಿ ಶೋಗಳನ್ನು ಮಾಡಿದ್ದೇನೆ.

★ *ಹೊಸ ನಿರೂಪಕರ ತಯಾರಿ ಹೇಗಿರಬೇಕು ಅಂತ ಹೇಳ್ತೀರಾ?*

ಅಕುಲ್ ಬಾಲಾಜಿ ಒಬ್ಬ ನಿರೂಪಕ ಆಗಿದ್ದಾನೆ ಎಂದರೆ ಯಾರಾದರೂ ಆಗಬಹುದು. ಅವರಿಗೆ ಆತ್ಮ ವಿಶ್ವಾಸ ಇರಬೇಕು. ತಮ್ಮ ವೃತ್ತಿ ಬಗ್ಗೆ ನಂಬಿಕೆ ಇರಬೇಕು. ನಟನೆ– ನಿರೂಪಣೆ ಎಂದು ಎರಡು ದೋಣಿಯಲ್ಲಿ ಪಯಣಿಸುವ ಆಶೆ ಇಟ್ಟುಕೊಳ್ಳಬಾರದು. ಅವರದೇ ಆದ ಶೈಲಿಯನ್ನು ಬೆಳೆಸಿಕೊಳ್ಳಬೇಕು. ಕಾಲೆಳೆದಾಗ, ನಮ್ಮನ್ನು ಅಪಹಾಸ್ಯ ಮಾಡಿದಾಗ ತಲೆಕೆಡಿಸಿಕೊಳ್ಳಬಾರದು. ಖುಷಿ ಖುಷಿಯಾಗಿ ಎಲ್ಲವನ್ನೂ ಸ್ವೀಕರಿಸಬೇಕು. ಯಾರನ್ನೂ ಅನುಕರಣೆ ಮಾಡದೆ ಸ್ವಂತಿಕೆಯನ್ನು ರೂಢಿಸಿಕೊಳ್ಳಬೇಕು. ಜನರನ್ನು ರಂಜಿಸುವ ಬಗ್ಗೆ ಯೋಚಿಸಬೇಕು. ನಿರೂಪಣೆಗೂ ಅದರದೇ ಆದ ಸ್ಥಾನಮಾನ, ಘನತೆ ಇದೆ. ಅದರ ಮೌಲ್ಯವನ್ನು ಅರಿತರೆ ಸಾಕೇ ಸಾಕು.

■ **ರಾಘವೇಂದ್ರ**